ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸುಮಾರು ಇನ್ನೂ ೨೯೩ ಸೈಟುಗಳನ್ನು ಕೊಡ ಬೇಕಾಗಿದೆ. ಎಲ್ಲಾ ಸೈಟುಗಳ ಬಗ್ಗೆ ಕೋರ್ಟಿನಲ್ಲಿ ಕೇಸು ಇದೆ. ಇದರ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಈ ಕೇಸುಗಳನ್ನು ಬೇಗ ಇತ್ಯರ್ಥ ಮಾಡುವುದಕ್ಕೆ ಹೈಕೋರ್ಟಿಗೆ, ಅಡ್ವೋಕೇಟ್ ಜನರಲ್ ಅವರ ಮುಖಾಂತರ ಪತ್ರ ಬರೆದಿದ್ದೇನೆ. ಬೇಗ ಇತ್ಯರ್ಥವಾಗಲೀ ಎನ್ನುತಕ್ಕ ಆಸೆಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಅಧ್ಯಕ್ಷರೇ, ಚಂದುಕಟ್ಟಮೊಳಿ, ವೆಂಕಟೇಶಚಿತ್ರ ಮುಂತಾದ ಗ್ರಾಮಗಳಲ್ಲಿ ಈ ಕಾರ್ಯಕ್ರಮ ಜಾರಿ ಮಾಡಿದ್ದರೂ ಸಹ ಇನ್ನು ಕೆಲವರಿಗೆ ಸೈಟುಗಳನ್ನು ಹಂಚು ವುದಕ್ಕಾಗಿಲ್ಲ. ಇವರಿಗೆ ಆಲ್ಟರ್‌ನೇಟಿವ್ ಸೈಟುಗಳನ್ನು ಕೊಡಲು ಜಮೀನು ಅಕ್ವೈರ್ ಮಾಡು ವುದಕ್ಕೆ ಸರ್ಕಾರ ಆದೇಶ ಕೊಟ್ಟು ಇನ್‌ಷಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರತಕ್ಕಂಥ ಕೇಸುಗಳು ಇತ್ಯರ್ಥವಾದರೆ, ಬಹುಶಃ ಎಲ್ಲರಿಗೂ ನಿವೇಶನಗಳು ಸಿಗಬಹುದು. ಇತ್ಯರ್ಥ ಆಗದೇ ಬೇರೆ ಅಕ್ವಿಸಿಷನ್‌ಗೆ ಹೋದರೆ ತೊಂದರೆ ಆಗಿ, ನಮ್ಮ ಉದ್ದೇಶ ಸಫಲವಾಗುವುದಿಲ್ಲವೆಂದು ಭಾವಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಈಗ ಸರ್ಕಾರದವರು ಹೈಕೋರ್ಟಿನಲ್ಲಿರತಕ್ಕ ಕೇಸುಗಳನ್ನು ಬೇಗ ವಿಲೇವಾರಿ ಮಾಡುವುದಕ್ಕೆ ಅಡ್ವೋಕೇಟ್ ಜನರಲ್ ಅವರನ್ನು ಕರೆಸಿ ಮಾತನಾಡಿ ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಮಾಡುತ್ತಾ ಇದ್ದೇನೆ.

ಗೋಕಾಕ್ ತಾಲ್ಲೂಕಿನಲ್ಲಿ ಗ್ರಾಮಾಂತರ ಸಾರಿಗೆ ಯೋಜನೆಯ ಮೇರೆಗೆ ಸಾರಿಗೆ ಸೌಲಭ್ಯ

೪೪೬ (೧೦೪೩) ಶ್ರೀ ಎಂ.ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗೋಕಾಕ್ ತಾಲ್ಲೂಕಿನಲ್ಲಿ ಗ್ರಾಮಾಂತರ ಸಾರಿಗೆ ಯೋಜನೆಯಲ್ಲಿ ಈವರೆಗೂ ಸಾರಿಗೆ ಸೌಲಭ್ಯ ಕಲ್ಪಿಸಿದ ಗ್ರಾಮಗಳೆಷ್ಟು ಹಾಗೂ ಅವುಗಳಾವುವು ?

ಆ) ಸೌಲಭ್ಯ ದೊರಕಿಸಿದಿರಲು ಕಾರಣಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ೧೪–ಅವುಗಳನ್ನು ಈ ಕೆಳಗೆ ಸೂಚಿಸಿದೆ.—

೧) ಗುಡ್ಡಿಹಳ್ಳಿ
೨) ಗುಲಗಂಜಿಕೊಪ್
೩) ಪಟ್ಟಿಗುಂಡಿ
೪) ಕಮಲ್ ದಿಣ್ಣೆ
೫) ಮುಟ್ಟನಾಳ್
೬) ಪಮಲ್‌ದಿಣ್ಣೆ
೭) ರಾಜಕಟ್ಟಿ
೮) ರಂಗಾಪುರ
೯) ಶಿಂಗೆಹೊಳೆ
೧೦) ಚಿಗದೊಳಿ
೧೧) ಹಡಗಿಹಾಳ್
೧೨) ಉಡಗಟ್ಟಿ

೧೫) ಅರಬಾವಿದವತ್ತಿ

೧೪) ಸಿದ್ದಾಪುರಟ್ಟಿ

ಆ) ಈ ಮೇಲ್ಕಂಡ ಗ್ರಾಮಗಳಿಗೆ ಮೋಟಾರು ವಾಹನಗಳು ಓಡಾಡಲು ಯೋಗ್ಯವಾದ ರಸ್ತೆಗಳಿಲ್ಲ.

ಶ್ರೀ ಎಂ.ಪಿ. ಪ್ರಕಾಶ್.—ಈಗಾಗಲೇ ಹೇಳಿದಂತೆ ೧೪ ಗ್ರಾಮಗಳಲ್ಲಿ ಅನೇಕ ರಸ್ತೆ ಸಂಪರ್ಕ ಇದ್ದರೂ ಕೂಡ ಈ ಗ್ರಾಮಗಳಿಗೆ ಸರಿಯಾದ ಸಾರಿಗೆ ವ್ಯವಸ್ಥೆ ಕಲ್ಪಿಸಲಿಕ್ಕಾಗಿಲ್ಲ.

ಶ್ರೀ ಎಂ.ಎಲ್. ಮುತ್ತಣ್ಣನವರ್.—ಈ ೧೪ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್.—ಅಧ್ಯಕ್ಷರೇ, ಈ ತಾಲ್ಲೂಕಿನ ೧೦೬ ಗ್ರಾಮಗಳ ಪೈಕಿ ನನ್ನ ಮಾಹಿತಿ ಪ್ರಕಾರ, ೯೨ ಹಳ್ಳಿಗಳಲ್ಲಿ ಈಗಾಗಲೇ ಸಾರಿಗೆ ಸಂಪರ್ಕ ಕಲ್ಪಿಸಿದೆ. ಇಲ್ಲಿ ನಮೂದಿಸಿರತಕ್ಕ ೧೪ ಹಳ್ಳಿಗಳಲ್ಲಿ ಸಾರಿಗೆ ಸೌಲಭ್ಯ ಇಲ್ಲ. ಇದನ್ನು ಗಮನಕ್ಕೆ ತಂದಿದ್ದಾರೆ. ಇದನ್ನು ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

೪೪೭ (೧೦೫೭) ಮಾನ್ಯ ಸದಸ್ಯರು ಗೈರು ಹಾಜರು.

ಹೊಸಕೋಟೆ ಟೌನಿನಲ್ಲಿ ಬಸ್ ನಿಲ್ದಾಣ ನಿರ್ಮಾಣ

೪೪೮ (೯೫೮) ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹೊಸಕೋಟೆ ಟೌನಿನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತೆಗೆದುಕೊಂಡ ಕ್ರಮಗಳೇನು ?

ಆ) ಹೊಸಕೋಟೆ ಟೌನಿನಲ್ಲಿ ಉದ್ದೇಶಿತ ಬಸ್ ನಿಲ್ದಾಣ ನಿರ್ಮಿಸಲು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯಿಂದ ನಿವೇಶನದ ಆಯ್ಕೆಯಾಗಿದೆಯೇ ?

ಇ) ಹಾಗಿದ್ದರೆ ಬಸ್ ನಿಲ್ದಾಣದ ನಿರ್ಮಾಣವನ್ನು ಯಾವಾಗ ತೆಗೆದುಕೊಳ್ಳಲಾಗುವುದು ಮತ್ತು ಈ ನಿರ್ಮಾಣದ ಅಂದಾಜು ವೆಚ್ಚವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು).—

ಅ) ಸೂಕ್ತ ನಿವೇಶನವನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಇಲ್ಲ. ಸೂಕ್ತ ನಿವೇಶನಕ್ಕಾಗಿ ಶೋಧನೆ ನಡೆಸಲಾಗುತ್ತಿದೆ.

ಇ) ಸೂಕ್ತ ನಿವೇಶನದ ಆಯ್ಕೆ ಮುಗಿದ ನಂತರ ಸಂಸ್ಥೆಯ ಸಂಪನ್ಮೂಲಗಳನುಗುಣವಾಗಿ ಬಸ್ ನಿಲ್ದಾಣ ಕಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಸಿಂಧನೂರಿನಲ್ಲಿ ಬಸ್ ನಿಲ್ದಾಣ ನಿರ್ಮಾಣ

೪೪೯ (೧೦೫೭) ಶ್ರೀ ಎಂ. ಮಲ್ಲಪ್ಪ (ಸಿಂಧನೂರು).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಿಂಧನೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸ್ಥಳ ನಿರ್ಣಯವಾಗಿದೆಯೆ?

ಆ) ಹಾಗಿದ್ದಲ್ಲಿ ಈ ಸ್ಥಳದ ಬಗ್ಗೆ ಯಾವುದೇ ತಕರಾರುಗಳು ಇವೆಯೇ?